ಸಿ.ಸಿ..ನಂ.130-24

ಪಿ.ಡಬ್ಲ್ಯೂ-1

ದಿನಾಂಕ. 23 -01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು..

**ಪಾಟೀ ಸವಾಲುಃ** **ಆರೋಪಿ ಪರ ಶ್ರೀ ಪಿ.ಎಸ್ ಎನ್ ವಕೀಲರಿಂದಃ**

1. ಒಂದು ಸಾಲದ ಕಾರಾರು ಆದರೆ ಆ ಸಾಲದ ಕರಾರಿನಲ್ಲಿ ನಿಗದಿತ ಅವಧಿಯಲ್ಲಿ ಹಣವನ್ನು ಮರು ಪಾವತಿ ಮಾಡಬೇಕು ಎಂದರೆ ಇರುತ್ತದೆ ಅಂತಹ ಕರಾರನ್ನು ನೀವು ಮಾಡಿ ಕೊಂಡಿರುತ್ತಿರಾ ಎಂದರೆ ನನಗೆ ನೆನಪಿಗೆ ಬರುತ್ತಿಲ್ಲ . ಒಂದು ಸಾಲದ ಕರಾರವನ್ನು ಮಾಡಿಕೊಂಡರೆ ಅದರಲ್ಲಿ ಆ ಹಣಕ್ಕೆ ಮರು ಪಾವತಿ ಯಾಗದೆ ಇದ್ದರೆ ಪುನಃ ಇನ್ನೊಂದು ಕರಾರು ಮಾಡಿ ಕೊಳ್ಳುತ್ತೀರಿ ಎಂದರೆ ಎರಡನೆ ಕರಾರು ಮಾಡಿ ಕೊಂಡಿದ್ದೇನೆ . ಎರಡನೆ ಕರಾರಿನಲ್ಲಿ ಮೊದಲಿನ ಕರಾರಿನ ಪ್ರಕಾರ ಎಷ್ಟು ಹಣ ಬರಬೇಕಾಗಿತ್ತು ಎಂದು ಅದರಲ್ಲಿ ನಮೂದು ಮಾಡುತ್ತಿರಿ ಎಂದರೆ ರೂ 2,75,000 ಹಣ ಎಂದು ನಮೂದು ಮಾಡಲಾಗಿರುತ್ತದೆ . ನೀವು ರಜಿಸ್ಟರ್ಡ ಆದ ಮೂಲ ಕರಾರು ಪ್ರತಿ ಹಾಜರ ಪಡಿಸಿಲ್ಲ ಬರಿ ಡೂಪ್ಲಿಕೇಟ್ ಪ್ರತಿ ಹಾಜರ ಪಡಿಸಿರುತ್ತೀರಿ ಎಂದರೆ ಸರಿಯಲ್ಲ . ಒಂದನೆ ಕರಾರು ಪತ್ರ ವನ್ನು ಆರೋಪಿ ಬರೆದು ಕೊಟ್ಟಿದ್ದು ಆರೋಪಿ ಇಟ್ಟು ಕೊಂಡಿದ್ದಾನೆ .2 ನೇ ಕರಾರು ಪತ್ರ ನನ್ನ ಬಳಿ ಇದೆ . ಸಾಲ ಮರು ಪಾವತಿ ಯಾದ ನಂತರ ಸಾಲದ ಕರಾರು ಪತ್ರಗಳನ್ನು ಅವರಿಗೆ ವಾಪಸ್ಸು ಕೊಡುತಿರಿ ಎಂದರೆ ಅವರು ನನಗೆ ಹಣ ಮರು ಪಾವತಿ ಮಾಡಿಲ್ಲ ಹಾಗಾಗಿ ಸಾಲದ ಕರಾರು ಪತ್ರ ನಾನು ಅವರಿಗೆ ವಾಪಸ್ಸು ಕೊಟ್ಟಿಲ್ಲ . ನೀವು ಸಾಲಗಾರನಿಂದ ಖಾಲಿ ಚೆಕ ಪಡೆದುಕೊಂಡು ಅದನ್ನು ದುರುಪಯೋಗ ಪಡಿಸಿಕೊಂಡು ನ್ಯಾಯಾಲಯದ ಮುಂದೆ ಹಾಜರ ಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ . ಈ ಪ್ರಕರಣಕ್ಕೂ ಆರೋಪಿಗೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ . ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ

.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.